# ಕರ್ನಾಟಕ ವಿಧಾನಪರಿಷತ್ತು

## ನೂರ ನಲವತ್ತ ಮೂರನೆಯ ಅಧಿವೇಶನದ ಮುಂದುವರೆದ ಉಪವೇಶನ

## ಚುಕ್ಕೆ ರಹಿತ ಪ್ರಶ್ನೆ

ದಿನಾಂಕ : 15-03-2021 ಪ್ರಶ್ನೆ ಸಂಖ್ಯೆ : 999(1338)

ಸದಸ್ಯರ ಹೆಸರು ಮತ್ತು ಕ್ಷೇತ್ರ : ಶ್ರೀ ನಿರಾಣಿ ಹಣಮಂತ ರುದ್ರಪ್ಪ(ಪದವೀಧರರ ಕ್ಷೇತ್ರ)

ಉತ್ತರ ನೀಡಬೇಕಾದ ದಿನಾಂಕ : 15-03-2021

ಉತ್ತರಿಸುವ ಸಚಿವರು: ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು

ವಿಷಯ : ಪದವಿಪೂರ್ವ ವೃತ್ತಿ ಶಿಕ್ಷಣ ಇಲಾಖೆಯ (ಜೆ.ಓ.ಸಿ.) ಸೇವೆ ಸಲ್ಲಿಸಿದ ಅರೆಕಾಲಿಕ ಸಿಬ್ಬಂದಿಗಳನ್ನು ಖಾಯಂಗೊಳಿಸುವ ಕುರಿತು

(ಅ) ಪದವಿಪೂರ್ವ ವೃತ್ತಿ ಶಿಕ್ಷಣ (ಜೆ.ಓ.ಸಿ.) ಯಲ್ಲಿ ಸೇವೆ ಸಲ್ಲಿಸಿದ ಅರೆಕಾಲಿಕ ಸಿಬ್ಬಂದಿಗಳನ್ನು ಖಾಯಂಗೊಳಿಸಬೇಕೆನ್ನುವ ಬೇಡಿಕೆಯು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಸರ್ಕಾರದ ಅಧಿಸೂಚನೆ ಸಂಖ್ಯೆ; ಸಂವ್ಯಶಾಇ: 22:ಶಾಸನ:2011, ದಿ: 06.04.2011ರ ರೀತ್ಯಾ 3,746 ಅರೆಕಾಲಿಕ (ಜೆ.ಓ.ಸಿ.) ಸಿಬ್ಬಂದಿಗಳನ್ನು ಖಾಯಂಗೊಳಿಸಲು ಯಾವ ಕ್ರಮ ಕೈಗೊಳ್ಳಲಾಗಿದೆ;

(ಇ) ಈ ಸದರಿ 3,746 ಅರೆಕಾಲಿಕ ಸಿಬ್ಬಂದಿಗಳನ್ನು ಖಾಯಂಗೊಳಿಸುವುದಕ್ಕಾಗಿ ಆರ್ಥಿಕ ಇಲಾಖೆ ಮತ್ತು ಕಾನೂನು ಇಲಾಖೆಗಳಿಂದ ಒಪ್ಪಿಗೆ ದೊರೆತಿದೆಯೇ;

(ಈ) 3,746 ಅರೆಕಾಲಿಕ ಸಿಬ್ಬಂದಿಗಳಲ್ಲಿ, 05 ವರ್ಷಗಳಿಗಿಂತಲೂ ಕಡಿಮೆ ಸೇವೆ ಸಲ್ಲಿಸಿರುವ ಸಿಬ್ಬಂದಿಗಳ ಸಂಖ್ಯೆ ಎಷ್ಟು; ಹಾಗೂ ಸದರಿಯವರುಗಳನ್ನು ಖಾಯಂಗೊಳಿಸುವ ಪ್ರಕ್ರಿಯೆಯನ್ನು ಕೈಬಿಡಲಾಗಿದೆಯೇ;

(ಉ) ಕೈಬಿಡಲಾಗಿರುವ ಅರೆಕಾಲಿಕ ಸಿಬ್ಬಂದಿಗಳನ್ನೂ ಸಹ ಖಾಯಂಗೊಳಿಸುವ ಪ್ರಕ್ರಿಯೆಯಲ್ಲಿ ಸೇರ್ಪಡೆ ಮಾಡಿಕೊಂಡು ಅವರುಗಳಿಗೂ ಮತ್ತು ಅವರುಗಳನ್ನು ಅವಲಂಬಿಸಿರುವ ಕುಟುಂಬದ ಸದಸ್ಯರಿಗೂ ಜೀವನಧಾರ ನೀಡಲು ಸರ್ಕಾರ ಅಗತ್ಯ ಕ್ರಮ ಕೈಗೊಳ್ಳಲು ಮುಂದಾಗುವುದೇ ?